# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority


ಸಂಖ್ಯೆ :
No. ಬೆಂಅಪ್ರಾ/ನಯೋಸ/AMF-32/ 1593 /2018-19.

ದಿನಾಂಕ :
Date : 07/12/2018

**ವಸತಿ ನಿವೇಶನಗಳ ಸಮಾಮೇಲನಾ ಆದೇಶ**

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದ ಸರ್ವೆ ಸಂಖ್ಯೆ:43/2 ಮತ್ತು ಇತರೆ ಸರ್ವೆ ಸಂಖ್ಯೆಗಳ ಪ್ರದೇಶಕ್ಕೆ ಕನಕಶ್ರೀ ಗೃಹ ನಿರ್ಮಾಣ ಸಹಕಾರ ಸಂಘ ಲಿ. ರವರ ಪರವಾಗಿ ಪ್ರಾಧಿಕಾರದಿಂದ ಅನುಮೋದಿತವಾಗಿರುವ ಖಾಸಗಿ ವಸತಿ ಬಡಾವಣೆಯಲ್ಲಿನ ವಸತಿ ನಿವೇಶನ ಸಂಖ್ಯೆ:18 ಮತ್ತು 19 ಗಳನ್ನು ಸಮಾಮೇಲನ ಮಾಡುವ ಬಗ್ಗೆ.

ಉಲ್ಲೇಖ:
1. ಸಕಾಲದ ಅಡಿಯಲ್ಲಿ ಸ್ವೀಕರಿಸಲಾದ ತಮ್ಮ ಅರ್ಜಿಯ ಜಿ.ಎಸ್.ಸಿ. ಸಂಖ್ಯೆ: BD099-00000-13427, ದಿನಾಂಕ.26/10/2018.
2. ಈ ಕಛೇರಿಯ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/AMF-32/1459/ 2018-19, ದಿನಾಂಕ 16-11-2018 ರಂದು ಉತ್ತಮತೆ ಶುಲ್ಕ, ಪರಿಶೀಲನಾ ಶುಲ್ಕ ಮತ್ತು GST ಶುಲ್ಕ ಒಳಗೊಂಡಂತೆ ಒಟ್ಟು ₹.18,980=00 ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ಅರ್ಜಿದಾರರಿಗೆ ತಿಳಿಸಿರುವುದು.
3. ಅರ್ಜಿದಾರರು ಬೆಂ.ಅ.ಪ್ರಾಧಿಕಾರದ ಕೆನರಾ ಬ್ಯಾಂಕ್ ಶಾಖೆಯಲ್ಲಿ ಚಲನ್ ನಂ.1930, ದಿನಾಂಕ 23/11/2018 ರ ಮೂಲಕ ಪಾವತಿಸಿರುವುದು.

------

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದ ಸರ್ವೆ ಸಂಖ್ಯೆ:43/2 ಮತ್ತು ಇತರೆ ಸರ್ವೆ ಸಂಖ್ಯೆಗಳ ಪ್ರದೇಶಕ್ಕೆ ಕನಕಶ್ರೀ ಗೃಹ ನಿರ್ಮಾಣ ಸಹಕಾರ ಸಂಘ ಲಿ. ರವರ ಪರವಾಗಿ ಪ್ರಾಧಿಕಾರದಿಂದ ಅನುಮೋದಿತವಾಗಿರುವ ಖಾಸಗಿ ವಸತಿ ಬಡಾವಣೆಯಲ್ಲಿನ ವಸತಿ ನಿವೇಶನ ಸಂಖ್ಯೆ:18 ಮತ್ತು 19 ರ ನಿವೇಶನಗಳನ್ನು ಸಮಾಮೇಲನೆಗೊಳಿಸುವಂತೆ ಉಲ್ಲೇಖ (1) ರ ಮನವಿಯಲ್ಲಿ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಷ್ಕೃತ ಮಹಾಯೋಜನೆ-2015 ರ ವಲಯ ನಿಯಮಾವಳಿ 6.2(ii) ರಡಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡುವ ಸಂಬಂಧ ವಿವಿಧ ಶುಲ್ಕಗಳನ್ನು ಪಾವತಿಸಲು ಉಲ್ಲೇಖ (2) ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ, ಉಲ್ಲೇಖ (3) ರಲ್ಲಿ ಒಟ್ಟು ಮೊತ್ತ ₹ 18,980=00 [₹ ಹದಿನೆಂಟು ಸಾವಿರದ ಒಂಭೈನೂರ ಎಂಭತ್ತು] ಗಳನ್ನು ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯ ಮಾಡಿ ಚಲನ್ ಪ್ರತಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದ ಸರ್ವೆ ಸಂಖ್ಯೆ:43/2 ಮತ್ತು ಇತರೆ ಸರ್ವೆ ಸಂಖ್ಯೆಗಳ ಪ್ರದೇಶಕ್ಕೆ ಕನಕಶ್ರೀ ಗೃಹ ನಿರ್ಮಾಣ ಸಹಕಾರ ಸಂಘ ಲಿ. ರವರ ಪರವಾಗಿ ಪ್ರಾಧಿಕಾರದಿಂದ ಅನುಮೋದಿತವಾಗಿರುವ ಖಾಸಗಿ ವಸತಿ ಬಡಾವಣೆಯಲ್ಲಿನ ವಸತಿ ನಿವೇಶನ ಸಂಖ್ಯೆ:18 ರ ಅಳತೆ 393.43 ಚ.ಮೀ. ಮತ್ತು ವಸತಿ ನಿವೇಶನ ಸಂಖ್ಯೆ:19 ರ ಅಳತೆ 391.17 ಚ.ಮೀ. ಅಳತೆಯ ಒಟ್ಟು 784.60 ಚ.ಮೀ. ವಿಸ್ತೀರ್ಣದ ಪ್ರದೇಶಕ್ಕೆ ಒಂದೇ ನಿವೇಶನವನ್ನಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿವೇಶನಗಳ ಸಮಾಮೇಲನಾ ಮಾಡಲಾಗಿದೆ.

...2

1. ಒಂದುಗೂಡಿಸಿದ ನಿವೇಶನಗಳು ಹಿಂದಿನ ಬಿಡಿ ನಿವೇಶನಗಳ ಭೂ-ಉಪಯೋಗ ವಲಯಕ್ಕೆ ಒಳಪಟ್ಟಿರುತ್ತವೆ. ಅಭಿವೃದ್ಧಿ ಮಿತಿಗಳು ಸಮಾಮೇಲನ ನಂತರದ ಅಳತೆಗಳಿಗೆ ಅನುಗುಣವಾಗಿರುತ್ತವೆ.
2. ಒಂದುಗೂಡಿಸಿದ ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಒಂದುಗೂಡಿಸಿದ ನಿವೇಶನದ ಅಳತೆಗಳಿಗೆ ಅನುಗುಣವಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿಯಂತೆ ಕಟ್ಟಡ ನಕ್ಷೆ ಅನುಮೋದನೆ ಪಡೆಯತಕ್ಕದ್ದು.
3. ಸದರಿ ಸಮಾಮೇಲನಾ ಆದೇಶವು ತಾಂತ್ರಿಕ ಅಭಿಪ್ರಾಯವೇ ಹೊರತು ಮಾಲೀಕತ್ವದ ದಾಖಲೆ ಎಂದು ನಿರೂಪಿಸಲು ಪರಿಗಣಿಸತಕ್ಕದ್ದಲ್ಲ.
4. ಸಮಾಮೇಲನಾ ಆದೇಶ ಪಡೆಯುವ ಸಂಬಂಧ ತಪ್ಪು ಮಾಹಿತಿ / ದಾಖಲೆಗಳನ್ನು ಸಲ್ಲಿಸಿ ಅನುಮೋದನೆ ಪಡೆದಿರುವುದು ದೃಢಪಟ್ಟಲ್ಲಿ ಯಾವುದೇ ಸೂಚನೆ ಇಲ್ಲದೆ ಅನುಮೋದನೆಯನ್ನು ರದ್ದುಪಡಿಸಲಾಗುವುದು.
5. ಸಮಾಮೇಲನಾಗೊಳಿಸಿದ ನಿವೇಶನದ ಅಳತೆಗಳಿಗೆ ಅನುಗುಣವಾಗಿ ನಡುಜಾಗಗಳನ್ನು ನಿಯಮಾವಳಿಗಳ ಪ್ರಕಾರ ಬಿಡತಕ್ಕದ್ದು.

ಸಮಾಮೇಲನಾಗೊಳಿಸಿದ ನಿವೇಶನದ ಅಳತೆ, ವಿಸ್ತೀರ್ಣ ಮತ್ತು ಚಕ್ಕುಬಂದಿ ವಿವರಗಳನ್ನು ತೋರಿಸುವ ಸಮಾಮೇಲನಾಗೊಳಿಸಿದ ನಕ್ಷೆಯ ನಾಲ್ಕು ಪ್ರತಿಗಳನ್ನು ಈ ಆದೇಶದೊಂದಿಗೆ ಅಡಕಗೊಳಿಸಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

7/12/2018

ಜಂಟಿ ನಿರ್ದೇಶಕರು (ಪೂರ್ವ),
ನಗರ ಯೋಜನಾ ವಿಭಾಗ,
ಬೆಂಅಪ್ರಾ, ಬೆಂಗಳೂರು.

ಇವರಿಗೆ

Sri. Paul E.George,
No.7, 3rd Cross,
Vivekananda Nagar,
Bangalore-560 033.